# ದಿ ಶಿರಸಿ ಅರ್ಬನ್ ಸಹಕಾರಿ ಬ್ಯಾಂಕ್ ಲಿಮಿಟೆಡ್

ದೂರವಾಣಿ ಸಂಖ್ಯೆ: 08384-226643 ಕೇಂದ್ರ ಕಛೇರಿ, ರಾಯರಪೇಟೆ, ಶಿರಸಿ-581 401 (ಉ.ಕ.) ಮೊಬೈಲ್ ಸಂ: 98807 65343

## ನೇಮಕಾತಿ ಪ್ರಕಟಣೆ

ನಮ್ಮ ಬ್ಯಾಂಕಿನಲ್ಲಿ ಖಾಲಿ ಇರುವ ಈ ಕೆಳಗಿನ ಹುದ್ದೆಗಳಿಗೆ ಅರ್ಹ ಅಭ್ಯರ್ಥಿಗಳಿಂದ ಅರ್ಜಿ ಆಹ್ವಾನಿಸಲಾಗಿದೆ.

| ಹುದ್ದೆಯ ಪದನಾಮ | ಒಟ್ಟೂ ಹುದ್ದೆಗಳ ಸಂಖ್ಯೆ | ವಿದ್ಯಾರ್ಹತೆ | ವೇತನ ಶ್ರೇಣಿ |
|---|---|---|---|
| ಫ್ರಂಟಡೆಸ್ಕ ಅಸೋಸಿಯೇಟ (Front Desk Associate) / ಕಸ್ಟಮರ್ ರಿಲೇಷನಶಿಪ ಅಸೋಸಿಯೇಟ (Customer Relationship Associate)<br><br>ಸದರಿ ಹುದ್ದೆಗಳು ಸಮನಾದ ಕೇಡರ್ ಹೊಂದಿರುತ್ತವೆ. | 30 (ಮೂವತ್ತು) | ಯಾವುದೇ ಅಂಗೀಕೃತ ವಿಶ್ವವಿದ್ಯಾಲಯದಿಂದ ಈ ಕೆಳಗಿನ ಯಾವುದೇ ಪದವಿಯನ್ನು ಹೊಂದಿರಬೇಕು. (ಪದವಿಯ ಎಲ್ಲಾ ವರ್ಷದ ಸರಾಸರಿ ಶೇಕಡಾ 50 ಮತ್ತು ಶೇಕಡಾ 50 ಕ್ಕಿಂತ ಹೆಚ್ಚು ಅಂಕಗಳನ್ನು ಪಡೆದು ತೇರ್ಗಡೆ ಹೊಂದಿರಬೇಕು.)<br>**ಬಿ.ಕಾಮ್/ ಬಿ.ಬಿ.ಎ/ ಬಿ.ಬಿ.ಎಮ್/ ಬಿ.ಇ/ ಬಿ.ಸಿ.ಎ/ ಬಿ.ಎಸ್.ಸಿ*/ ಬಿ.ಎ.****<br>* ಬಿ.ಎಸ್.ಸಿ – ಗಣಿತ ಅಥವಾ ಸಂಖ್ಯಾಶಾಸ್ತ್ರ ವಿಷಯವನ್ನು ಕಡ್ಡಾಯವಾಗಿ ಒಂದು ಐಚ್ಚಿಕ ವಿಷಯವನ್ನಾಗಿ ಅಧ್ಯಯನ ಮಾಡಿರಬೇಕು.<br>**ಬಿ.ಎ.–ಗಣಿತ, ಸಂಖ್ಯಾಶಾಸ್ತ್ರ ಅಥವಾ ಅರ್ಥಶಾಸ್ತ್ರ ವಿಷಯವನ್ನು ಕಡ್ಡಾಯವಾಗಿ ಒಂದು ಐಚ್ಚಿಕ ವಿಷಯವನ್ನಾಗಿ ಅಧ್ಯಯನ ಮಾಡಿರಬೇಕು<br>ಎಂ.ಬಿ.ಎ ಅಥವಾ ಎಂ.ಕಾಂ ಅಥವಾ ಎಂ.ಸಿ.ಎ ಅಥವಾ ಗಣಿತ/ ಸಂಖ್ಯಾಶಾಸ್ತ್ರ/ ಅರ್ಥಶಾಸ್ತ್ರ / ಬ್ಯಾಂಕಿಂಗ್ / ಎಕೌಂಟನ್ಸಿ ವಿಷಯಗಳೊಂದಿಗೆ ತೇರ್ಗಡೆಯಾಗಿ, ಸ್ನಾತಕೋತ್ತರ ಪದವಿ (ಮಾಸ್ಟರ್‌ಡಿಗ್ರಿ) ಹೊಂದಿದವರಿಗೆ ಹಾಗೂ ಡಿಪ್ಲೋಮಾ ಇನ್ ಬ್ಯಾಂಕಿಂಗ್/ ಡಿಪ್ಲೋಮಾ ಇನ್ ಕೋಒಪರೇಟಿವ್ ಬಿಸಿನೆಸ್ ಮ್ಯಾನೇಜ್ಮೆಂಟ್/ಜೆ.ಎ.ಐ.ಐ.ಬಿ/ ಸಿ.ಎ.ಐ.ಐ.ಬಿ ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿದವರಿಗೆ ಆದ್ಯತೆ ನೀಡಲಾಗುವುದು. | ರೂ. 34100–800–35700–900–39300–1000–43300–1125–47800–1250–52800–1375–58300–1500–64300–1650–74200–1900–85600–2300–99400–2700–107500 ಹಾಗೂ ಕಾಲಕಾಲಕ್ಕೆ ಕರ್ನಾಟಕ ರಾಜ್ಯ ಸರಕಾರಿ ನೌಕರರಿಗೆ ಅನ್ವಯವಾಗುವ ದರದಲ್ಲಿ ತುಟ್ಟಿಭತ್ಯೆ ಹಾಗೂ ಇತರ ಭತ್ಯೆಗಳು. |
| ಸೇವಕ/ಸಿಪಾಯಿ/ ಕಾವಲುಗಾರ/ ಭದ್ರತಾ ರಕ್ಷಕ (Attender/ Peon / Security Guard)<br><br>ಸದರಿ ಹುದ್ದೆಗಳು ಸಮನಾದ ಕೇಡರ್ ಹೊಂದಿರುತ್ತವೆ. | 10 (ಹತ್ತು) | ಎಸ್.ಎಸ್.ಎಲ್.ಸಿ ಪರೀಕ್ಷೆಯಲ್ಲಿ ಉತ್ತೀರ್ಣರಾಗಿದ್ದು, ಕನ್ನಡವನ್ನು ಒಂದು ಭಾಷೆಯಾಗಿ ಓದಿರಬೇಕು. | 27000–650–29600–725–32500–800–35700–900–39300–1000–43300–1125–47800–1250–52800–1375–58300–1500–64300–1650–74200–1900–83700 ಹಾಗೂ ಕಾಲ ಕಾಲಕ್ಕೆ ಕರ್ನಾಟಕ ರಾಜ್ಯ ಸರಕಾರಿ ನೌಕರರಿಗೆ ಅನ್ವಯವಾಗುವ ದರದಲ್ಲಿ ತುಟ್ಟಿಭತ್ಯೆ ಹಾಗೂ ಇತರ ಭತ್ಯೆಗಳು. |

ಅರ್ಜಿ ನಮೂನೆ, ವಯೋಮಿತಿ, ಅರ್ಜಿ ಶುಲ್ಕ, ಆಯ್ಕೆ ವಿಧಾನ, ನಿಬಂಧನೆಗಳು ಮತ್ತು ಸೂಚನೆಗಳು ಇತ್ಯಾದಿ ವಿವರಗಳು ಬ್ಯಾಂಕಿನ ಅಧಿಕೃತ ಜಾಲತಾಣ "www.sirsiurbanbank.bank.in"ದಲ್ಲಿ ಲಭ್ಯವಿರುತ್ತದೆ. ಬ್ಯಾಂಕು ಪೂರೈಸುವ ಅರ್ಜಿ ನಮೂನೆಗಳನ್ನು ಭರ್ತಿ ಮಾಡಿ ಸೂಕ್ತ ದಾಖಲಾತಿಗಳನ್ನು ಸ್ವದೃಢೀಕೃತ ಪ್ರತಿಗಳೊಂದಿಗೆ ಅರ್ಜಿಯನ್ನು **"ಮುಖ್ಯ ಕಾರ್ಯನಿರ್ವಹಣಾಧಿಕಾರಿ, ದಿ ಶಿರಸಿ ಅರ್ಬನ್ ಸಹಕಾರಿ ಬ್ಯಾಂಕ್ ಲಿ., ಕೇಂದ್ರ ಕಛೇರಿ, ರಾಯರಪೇಟೆ, ಶಿರಸಿ – 581 401 (ಉ.ಕ)"**, ಈ ವಿಳಾಸಕ್ಕೆ ಪ್ರಕಟಣೆಯ ದಿನಾಂಕದಿಂದ 21 ದಿನಗಳೊಳಗಾಗಿ ತಲುಪುವಂತೆ ಸಲ್ಲಿಸತಕ್ಕದ್ದು. ಭರ್ತಿ ಮಾಡಿದ ಅರ್ಜಿಗಳನ್ನು ಬ್ಯಾಂಕಿನ ಕೇಂದ್ರ ಕಛೇರಿಗೆ **ದಿನಾಂಕ 28.07.2026**ರ ಸಾಯಂಕಾಲ 5:00 ಗಂಟೆಯೊಳಗೆ ತಲುಪುವಂತೆ ಕಳುಹಿಸತಕ್ಕದ್ದು. ಅರ್ಜಿಗಳನ್ನು ಸಲ್ಲಿಸಲು ನಿಗದಿಪಡಿಸಿದ ಕೊನೆಯ ದಿನಾಂಕ ಸಾರ್ವತ್ರಿಕ ರಜೆ ದಿನವಾಗಿದ್ದರೆ, ಮುಂದಿನ ಕೆಲಸದ ದಿನವು ಅರ್ಜಿಯನ್ನು ಸ್ವೀಕರಿಸಲು ಕೊನೆಯ ದಿನಾಂಕವಾಗಿರುತ್ತದೆ. ಕೊನೆಯ ದಿನಾಂಕದ ನಂತರ ಬಂದ ಅರ್ಜಿಗಳನ್ನು ಹಾಗೂ ಅಪೂರ್ಣ ಅರ್ಜಿಗಳನ್ನು ಪರಿಗಣಿಸಲಾಗುವುದಿಲ್ಲ. ಅರ್ಜಿಯ ಜೊತೆಗೆ **"Chief Executive Officer, The Sirsi Urban Sahakari Bank Ltd.,Sirsi "** ಹೆಸರಿಗೆ ತೆಗೆದ **ರೂ. 1,000–00 (ರೂಪಾಯಿ ಒಂದು ಸಾವಿರ ಮಾತ್ರ)** ಯ ಡಿಮಾಂಡ ಡ್ರಾಪ್ಟನ್ನು ಸಲ್ಲಿಸತಕ್ಕದ್ದು. ಒಂದೇ ಅಭ್ಯರ್ಥಿಯು ಈ ಮೇಲ್ಕಾಣಿಸಿದ ಎರಡೂ ಹುದ್ದೆಗಳಿಗೂ ಅರ್ಜಿ ಸಲ್ಲಿಸುವುದಿದ್ದಲ್ಲಿ ಪ್ರತಿ ಹುದ್ದೆಗೆ ಪ್ರತ್ಯೇಕವಾಗಿ ಅರ್ಜಿಯನ್ನು, ಸೂಕ್ತ ಅರ್ಜಿ ಶುಲ್ಕದ ಜೊತೆಗೆ ಸಲ್ಲಿಸತಕ್ಕದ್ದು ಹಾಗೂ ಲಕೋಟೆಯ ಮೇಲೆ ಯಾವ ಹುದ್ದೆಗೆ ಅರ್ಜಿ ಸಲ್ಲಿಸುತ್ತಿರೋ ಆ ಹುದ್ದೆಯನ್ನು ಅಂದರೆ **ಫ್ರಂಟ ಡೆಸ್ಕ ಅಸೋಸಿಯೇಟ** (Front Desk Associate) / **ಕಸ್ಟಮರ್ ರಿಲೇಷನಶಿಪ ಅಸೋಸಿಯೇಟ** (Customer Relationship Associate) ಅಥವಾ **ಸೇವಕ/ಸಿಪಾಯಿ/ಕಾವಲುಗಾರ/ಭದ್ರತಾ ರಕ್ಷಕ** (Attender/ Peon/Security Guard) ಹುದ್ದೆಗೆ ಅರ್ಜಿ" ಎಂದು ಸ್ಪಷ್ಟವಾಗಿ ನಮೂದಿಸತಕ್ಕದ್ದು.

ಸಿಬ್ಬಂದಿ ನೇಮಕಾತಿ ಸಮಿತಿ ಪರವಾಗಿ

**ಸಹಿ/– ಮುಖ್ಯ ಕಾರ್ಯನಿರ್ವಹಣಾಧಿಕಾರಿ**

**ಸ್ಥಳ: ಶಿರಸಿ**

**ದಿನಾಂಕ: 07.07.2026**

ದಿ ಶಿರಸಿ ಅರ್ಬನ್ ಸಹಕಾರಿ ಬ್ಯಾಂಕ್ ಲಿಮಿಟೆಡ್, ಶಿರಸಿ (ಉ.ಕ.)